# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು.

ಸಂಖ್ಯೆ: ಮುಅ(ಓ.ಎಫ್.ಸಿ.ಕೋಶ)/ಪಿಆರ್/625/16-17 ದಿನಾಂಕ:05-12-2016

## ಕಛೇರಿ ಆದೇಶ

**ವಿಷಯ:** **ಓ.ಎಫ್.ಸಿ ಅಳವಡಿಕೆ ಮನವಿಗಳನ್ನು ನಿರ್ವಹಿಸುವ ಪಾಲಿಕೆಯ ಜಿ.ಐ.ಎಸ್. ಜಾಲತಾಣದಲ್ಲಿ ಓ.ಎಫ್.ಸಿ ಅಳವಡಿಕೆ ಅನುಮತಿ ಪ್ರಕ್ರಿಯೆಯಲ್ಲಿ ಮಾರ್ಪಾಡುಗಳನ್ನು ಮಾಡಿರುವ ಬಗ್ಗೆ ಮತ್ತು ಅನಧೀಕೃತ ಓ.ಎಫ್.ಸಿ ಅಳವಡಿಕೆ ಕುರಿತು ಕ್ರಮ ಕೈಗೊಳ್ಳುವ ಬಗ್ಗೆ.**

**ಉಲ್ಲೇಖ:** ಓ.ಎಫ್.ಸಿ. ಅಳವಡಿಕೆ ಕುರಿತು ವಿಶೇಷ ಆಯುಕ್ತರು (ಯೋಜನೆ)ರವರ ಅಧ್ಯಕ್ಷತೆಯಲ್ಲಿ ದಿನಾಂಕ 19-08-2016 ಮತ್ತು 23-09-2016 ರಂದು ನಡೆದ ಸಭೆಯ ನಡಾವಳಿಗಳು

*********

ಪಾಲಿಕೆ ವ್ಯಾಪ್ತಿಯಲ್ಲಿ ತಮ್ಮ ವಾರ್ಡ್ ಕಾರ್ಯವ್ಯಾಪ್ತಿಯಲ್ಲಿ ಅನಧೀಕೃತ ಕೇಬಲ್ ಅಳವಡಿಸದಂತೆ ತಡೆಯುವ ಜವಾಬ್ದಾರಿ ಆಯಾ ವಾರ್ಡ್‌ನ ಸಹಾಯಕ ಅಭಿಯಂತರರಿಗೆ ಇದ್ದು, ಈ ಬಗ್ಗೆ ಸೂಕ್ತ ಮತ್ತು ನಿಯಮಿತ ಕ್ರಮಗಳನ್ನು ಕೈಗೊಳ್ಳಬೇಕಿರುತ್ತದೆ. ಈ ಹಿಂದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, ಓ.ಎಫ್.ಸಿ ಅಳವಡಿಕೆ ಅನುಮತಿ ನೀಡುವ ಪೂರ್ವದಲ್ಲಿ ಸಂಬಂಧಪಟ್ಟ ಸಹಾಯಕ ಅಭಿಯಂತರರ, ಸಹಾಯಕ ಕಾರ್ಯಪಾಲಕ ಅಭಿಯಂತರರ, ಕಾರ್ಯಪಾಲಕ ಅಭಿಯಂತರರ ಮತ್ತು ಮುಖ್ಯ ಅಭಿಯಂತರರ ಅಭಿಪ್ರಾಯಗಳನ್ನು ಪಡೆದು ಪಾಲಿಕೆಯ ಜಿ.ಐ.ಎಸ್. ಜಾಲತಾಣದಲ್ಲಿ ಓ.ಎಫ್.ಸಿ ಅಳವಡಿಕೆ ಮನವಿಗಳನ್ನು ವಿಲೇವಾರಿ ಮಾಡಲಾಗುತ್ತಿತ್ತು.

ಸದರಿ ಆನ್‌ಲೈನ್ ಪ್ರಕ್ರಿಯೆಯಲ್ಲಿ ಹಲವಾರು ಹಂತಗಳಲ್ಲಿ ವಿವಿಧ ಅಧಿಕಾರಿಗಳಿಂದ ಅಭಿಪ್ರಾಯಗಳನ್ನು ಪಡೆಯುತ್ತಿದ್ದ ಹಿನ್ನೆಲೆಯಲ್ಲಿ ಮತ್ತು ಅಭಿಪ್ರಾಯ ನೀಡುವುದಕ್ಕೆ ನಿರ್ದಿಷ್ಟ ಕಾಲಾವಧಿಯನ್ನು ನಿಗದಿಪಡಿಸದ ಕಾರಣ ಅನುಮತಿ ನೀಡುವುದಕ್ಕೆ ಆಗುತ್ತಿದ್ದ ವಿಳಂಬದ ಬಗ್ಗೆ ಹಲವಾರು ಬಾರಿ ಓ.ಎಫ್.ಸಿ ಸಂಸ್ಥೆಯವರು ಮೇಲಧಿಕಾರಿಗಳು ಮತ್ತು ಸರಕಾರದ ಮಟ್ಟದಲ್ಲಿ ಕೂಡ ಮನವಿ ಸಲ್ಲಿಸಿರುತ್ತಾರೆ. ಸದರಿ ವಿಳಂಬವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಉಲ್ಲೇಖಿತ ಸಭೆಗಳಲ್ಲಿ ತೀರ್ಮಾನ ಕೈಗೊಂಡಂತೆ ಪಾಲಿಕೆಯ ಜಿ.ಐ.ಎಸ್. ಜಾಲತಾಣದಲ್ಲಿ ಓ.ಎಫ್.ಸಿ ಅಳವಡಿಕೆ ಅನುಮತಿ ಪ್ರಕ್ರಿಯೆಯಲ್ಲಿ ಅಗತ್ಯ ಮಾರ್ಪಾಡುಗಳನ್ನು ಮಾಡಲಾಗಿದೆ.

1. ಪ್ರಸ್ತುತ ಎಲ್ಲ ಓ.ಎಫ್.ಸಿ. ಸಂಸ್ಥೆಗಳು ಆನ್‌ಲೈನ್ ತಂತ್ರಾಂಶದಲ್ಲಿ ತಮ್ಮ ಅಧೀಕೃತ (ಭೂಗತ ಮತ್ತು ಮೇಲ್ಮಟ್ಟದ) ಮತ್ತು ಅನಧೀಕೃತ (ಭೂಗತ ಮತ್ತು ಮೇಲ್ಮಟ್ಟದ) ಕೇಬಲ್ ಅಳವಡಿಕೆಗಳನ್ನು ದಾಖಲಿಸುತ್ತಿದ್ದು ಸದರಿ ಮಾಹಿತಿಯ ಆಧಾರದಲ್ಲಿ ಓ.ಎಫ್.ಸಿ. ಅಳವಡಿಕೆಯನ್ನು ಹೋಲಿಸಿ ದೃಢಪಡಿಸಿಕೊಳ್ಳಲು ಸಂಬಂಧಪಟ್ಟ ವಲಯ ಸಹಾಯಕ ಅಭಿಯಂತರರಿಗೆ ಸೂಚಿಸಿದೆ.

2. ಮಾರ್ಪಾಡುಗೊಳಿಸಿರುವ ಪ್ರಕ್ರಿಯೆಯಂತೆ ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಓ.ಎಫ್.ಸಿ ಅಳವಡಿಕೆ ಅನುಮತಿ ಅಗೆತದ ಅನುಮತಿಗಳನ್ನು ನೀಡುವ ಪೂರ್ವದಲ್ಲಿ ಸದರಿ ವಾರ್ಡ್‌ಗಳ ಉಸ್ತುವಾರಿ ಹೊಂದಿರುವ ಸಹಾಯಕ ಅಭಿಯಂತರರಿಂದ ಸಹಾಯಕ ಕಾರ್ಯಪಾಲಕ ಅಭಿಯಂತರರ ಮೂಲಕ ಅಭಿಪ್ರಾಯ ಪಡೆದು ನೇರವಾಗಿ

ಓ.ಎಫ್.ಸಿ.ಕೋಶದ ಮುಖ್ಯ ಅಭಿಯಂತರರಿಗೆ ಕಳುಹಿಸುವ ವ್ಯವಸ್ಥೆ ಅಳವಡಿಸಲಾಗಿದೆ. ಹಾಗೂ ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಕಾರ್ಯವ್ಯಾಪ್ತಿಯಲ್ಲಿ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರಿಂದ ಮುಖ್ಯ ಅಭಿಯಂತರರು(ರಮೂಸೌ) ರವರ ಮೂಲಕ ಅಭಿಪ್ರಾಯ ಪಡೆದು ನೇರವಾಗಿ ಓ.ಎಫ್.ಸಿ.ಕೋಶದ ಮುಖ್ಯ ಅಭಿಯಂತರರಿಗೆ ಕಳುಹಿಸುವ ವ್ಯವಸ್ಥೆ ಅಳವಡಿಸಲಾಗಿದೆ. ಸದರಿ ಅಧಿಕಾರಿಗಳನ್ನು ಹೊರತುಪಡಿಸಿ ಇತರ ಅಭಿಯಂತರರು ಅಥವಾ ಅಧಿಕಾರಿಗಳಿಂದ ಕೈಗೊಳ್ಳಬೇಕಿದ್ದ ಅಭಿಪ್ರಾಯ/ಕ್ರಮಗಳನ್ನು ಕೈಬಿಟ್ಟು ಪ್ರಕ್ರಿಯೆಯನ್ನು ಸೀಮಿತಗೊಳಿಸಲಾಗಿದೆ.

3. ಸದರಿ ಅಭಿಪ್ರಾಯಗಳನ್ನು ನೀಡಲು ಆನ್‌ಲೈನ್ ಮನವಿ ತಮ್ಮ ಪೋರ್ಟಲ್‌ನಲ್ಲಿ ಸ್ವೀಕೃತಗೊಂಡ ದಿನದಿಂದ ಕೆಳಕಂಡಂತೆ ಕಾಲಮಿತಿಯನ್ನು ಕೂಡ ಅಭಿಪ್ರಾಯ ನೀಡಬೇಕಿರುವ ಅಧಿಕಾರಿಗಳಿಗೆ ವಿಧಿಸಲಾಗಿದೆ.

**A. ವಾರ್ಡ್‌ಗಳ ರಸ್ತೆ ಕಾರ್ಯವ್ಯಾಪ್ತಿ**

- ಮು.ಅ. (ಓ.ಎಫ್.ಸಿ ಕೋಶ)ರವರಿಂದ ಓ.ಎಫ್.ಸಿ ಅಳವಡಿಕೆ ಮನವಿಯು ಅಭಿಪ್ರಾಯಕ್ಕಾಗಿ ತಮ್ಮ ಪೋರ್ಟಲ್‌ನಲ್ಲಿ ಸ್ವೀಕೃತಗೊಂಡ 9 ದಿನಗಳ ಒಳಗಾಗಿ **ಸಹಾಯಕ ಅಭಿಯಂತರರು** ತಮ್ಮ ಅಭಿಪ್ರಾಯ ದಾಖಲಿಸಿ ಮೇಲಧಿಕಾರಿಯಾದ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಆನ್‌ಲೈನ್ ಮುಖೇನ ಕಳುಹಿಸುವುದು.
- ಹೀಗೆ ಸಹಾಯಕ ಅಭಿಯಂತರರಿಂದ ಓ.ಎಫ್.ಸಿ ಅಳವಡಿಕೆ ಬಗ್ಗೆ ಅಭಿಪ್ರಾಯವು ತಮ್ಮ ಪೋರ್ಟಲ್‌ನಲ್ಲಿ ಸ್ವೀಕೃತಗೊಂಡ 5 ದಿನಗಳ ಒಳಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಅಭಿಪ್ರಾಯ ದಾಖಲಿಸಿ ಮು.ಅ. (ಓ.ಎಫ್.ಸಿ ಕೋಶ)ರವರಿಗೆ ಆನ್‌ಲೈನ್ ಮುಖೇನ ಕಳುಹಿಸುವುದು.

**B. ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಕಾರ್ಯವ್ಯಾಪ್ತಿ**

- ಮು.ಅ. (ಓ.ಎಫ್.ಸಿ ಕೋಶ)ರವರಿಂದ ಓ.ಎಫ್.ಸಿ ಅಳವಡಿಕೆ ಮನವಿಯು ಅಭಿಪ್ರಾಯಕ್ಕಾಗಿ ತಮ್ಮ ಪೋರ್ಟಲ್‌ನಲ್ಲಿ ಸ್ವೀಕೃತಗೊಂಡ 9 ದಿನಗಳ ಒಳಗಾಗಿ ಕಾರ್ಯಪಾಲಕ ಅಭಿಯಂತರರು ಅಭಿಪ್ರಾಯ ದಾಖಲಿಸಿ ಮೇಲಧಿಕಾರಿಯಾದ ಮುಖ್ಯ ಅಭಿಯಂತರರು (ರಮೂಸೌ) ಆನ್‌ಲೈನ್ ಮುಖೇನ ಕಳುಹಿಸುವುದು.
- ಹೀಗೆ ಕಾರ್ಯಪಾಲಕ ಅಭಿಯಂತರರಿಂದ ಓ.ಎಫ್.ಸಿ ಅಳವಡಿಕೆ ಬಗ್ಗೆ ಅಭಿಪ್ರಾಯವು ತಮ್ಮ ಪೋರ್ಟಲ್‌ನಲ್ಲಿ ಸ್ವೀಕೃತಗೊಂಡ 5 ದಿನಗಳ ಒಳಗಾಗಿ ಮುಖ್ಯ ಅಭಿಯಂತರರು (ರಮೂಸೌ)ರವರು ತಮ್ಮ ಅಭಿಪ್ರಾಯ ದಾಖಲಿಸಿ ಮು.ಅ. (ಓ.ಎಫ್.ಸಿ ಕೋಶ)ರವರಿಗೆ ಆನ್‌ಲೈನ್ ಮುಖೇನ ಕಳುಹಿಸುವುದು.

4. ತಮ್ಮ ಪೋರ್ಟಲ್‌ಗೆ ಆಗಮಿಸುವ ಎಲ್ಲ ಓ.ಎಫ್.ಸಿ ಅಳವಡಿಕೆ ಮನವಿಗಳನ್ನು ಕಾಲಮಿತಿಯಲ್ಲಿ ವಿಲೇವಾರಿ ಮಾಡುವ ಜವಾಬ್ದಾರಿಯು ಸಂಬಂಧಪಟ್ಟ ಅಭಿಯಂತರರದ್ದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಎಲ್ಲ ಅಭಿಯಂತರರೂ ಎಲ್ಲ ಮನವಿಗಳನ್ನು ವಿಲೇವಾರಿ ಮಾಡಲು ಸೂಚಿಸಿ, ಯಾವುದೇ ಕಾರಣಕ್ಕೆ ಓ.ಎಫ್.ಸಿ ಅಳವಡಿಕೆಯ ಅನುಮತಿ ಪ್ರಕ್ರಿಯೆ ತಮ್ಮ ಗಮನಕ್ಕೆ ಬರದೇ ನಡೆದಿದೆ ಎಂಬ ಸಬೂಬನ್ನು ಹೇಳುವುದನ್ನು ಪರಿಗಣಿಸಲಾಗುವುದಿಲ್ಲವೆಂದು ಸ್ಪಷ್ಟಪಡಿಸಿದೆ.

5. ಅಲ್ಲದೇ, ವಿಧಿಸಿರುವ ನಿರ್ದಿಷ್ಟ ಕಾಲಮಿತಿಯೊಳಗೆ ಅಧಿಕಾರಿಗಳು ತಮ್ಮ ಅಭಿಪ್ರಾಯ ನಮೂದಿಸಿ ಆನ್‌ಲೈನ್ ಮುಖೇನ ಕಳುಹಿಸದ ಸಂದರ್ಭಗಳಲ್ಲಿ ಕಾಲಮಿತಿ ಮೀರಿದ ತಕ್ಷಣ ಮುಂದಿನ ಹಂತಕ್ಕೆ ಸ್ವಯಂಚಾಲಿತವಾಗಿ ಓ.ಎಫ್.ಸಿ ಅಳವಡಿಕೆ ಮನವಿಯು **"ಅಭಿಪ್ರಾಯ ನೀಡುವ ಕಾಲಮಿತಿ ಮೀರಿರುವ ಕಾರಣ ಸ್ವಯಂಚಾಲಿತವಾಗಿ ಅನುಮೋದಿಸಲಾಗಿದೆ"** ಎಂಬ ಟಿಪ್ಪಣಿಯೊಂದಿಗೆ ಕಳುಹಿಸಲ್ಪಡುವ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

6. ಮತ್ತು ಹೀಗೆ ಸ್ವಯಂಚಾಲಿತವಾಗಿ ಅನುಮೋದಿಸಲ್ಪಟ್ಟು ಕಳುಹಿಸಲ್ಪಡುವ ಅಭಿಪ್ರಾಯಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಸಕಾರಾತ್ಮಕ ಅಭಿಪ್ರಾಯವೆಂದು ಪರಿಗಣಿಸಿ ಓ.ಎಫ್.ಸಿ.ಅಳವಡಿಕೆ ಮನವಿಗೆ ಡಿಮ್ಯಾಂಡ್ ನೋಟ್ ಜಾರಿಗೊಳಿಸಿ ನಿಗದಿತ ಶುಲ್ಕ ಪಡೆದು ಓ.ಎಫ್.ಸಿ.ಅಳವಡಿಕೆ ಅನುಮತಿ ನೀಡಲು ಓ.ಎಫ್.ಸಿ.ಕೋಶದ ಮುಖ್ಯ ಅಭಿಯಂತರರಿಗೆ ಸೂಚಿಸಲಾಗಿದೆ.

7. ಓ.ಎಫ್.ಸಿ ಅಳವಡಿಕೆಯ ಬಗ್ಗೆ ಅಭಿಪ್ರಾಯ ನೀಡಬೇಕಿರುವ ಅಧಿಕಾರಿಗಳು ಯಾವುದೇ ಕಾರಣಕ್ಕೆ ಸಕಾಲದಲ್ಲಿ ಅಭಿಪ್ರಾಯವನ್ನು ಪಾಲಿಕೆಯ ಜಿ.ಐ.ಎಸ್-ಓ.ಎಫ್.ಸಿ. ಜಾಲತಾಣದಲ್ಲಿ ದಾಖಲಿಸದ ಸಂದರ್ಭಗಳಲ್ಲಿ ಸ್ವಯಂಚಾಲಿತವಾಗಿ ಓ.ಎಫ್.ಸಿ ಅಳವಡಿಕೆ ಮನವಿಗೆ ಸಕಾರಾತ್ಮಕ ಅಭಿಪ್ರಾಯದೊಂದಿಗೆ ಮು.ಅ. (ಓ.ಎಫ್.ಸಿ ಕೋಶ)ರವರಿಗೆ ಕಳುಹಿಸಲ್ಪಟ್ಟು ಓ.ಎಫ್.ಸಿ. ಅಳವಡಿಕೆ ಅನುಮತಿ ನೀಡಲ್ಪಡುವ ಸಂದರ್ಭಗಳಲ್ಲಿ ಓ.ಎಫ್.ಸಿ. ಅಳವಡಿಕೆಯಿಂದಾಗಿ ಮುಂದೆ ಸಂಭವಿಸಬಹುದಾದ ಎಲ್ಲ ಅನಪೇಕ್ಷಿತ ಅಥವಾ ಪ್ರತಿಕೂಲ ಪರಿಣಾಮಗಳಿಗೆ, ತಮ್ಮ ಅಭಿಪ್ರಾಯವನ್ನು ಕಾಲಮಿತಿಯಲ್ಲಿ ನೀಡದ ವಲಯ ವ್ಯಾಪ್ತಿಯ **ಸಹಾಯಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಕಾರ್ಯಪಾಲಕ ಅಭಿಯಂತರರು ಮತ್ತು ಮುಖ್ಯ ಅಭಿಯಂತರರು** ನೇರವಾಗಿ ಹೊಣೆಗಾರರಾಗಿರುತ್ತಾರೆ.

ಹೀಗೆ ಸದರಿ ಓ.ಎಫ್.ಸಿ. ಅಳವಡಿಕೆ ಅನುಮತಿ ಪ್ರಕ್ರಿಯೆಯಲ್ಲಿ ಅನಗತ್ಯ ವಿಳಂಬವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಆನ್‌ಲೈನ್ ಪ್ರಕ್ರಿಯೆಯಲ್ಲಿ ಮಾಡಿರುವ ಮಾರ್ಪಾಡುಗಳ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಭಿಯಂತರರಿಗೆ ನಿಗದಿತ ಕಾಲಮಿತಿಯಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಮತ್ತು ಅನಧೀಕೃತ ಓ.ಎಫ್.ಸಿ ಅಳವಡಿಕೆ ಕುರಿತು ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಲು ಸೂಚಿಸಿದೆ. ಅಧಿಕಾರಿಗಳು ಸದರಿ ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ ತೋರಿರುವುದು ಅಥವಾ ಆದೇಶವನ್ನು ಉಪೇಕ್ಷಿಸಿರುವುದು ಅಥವಾ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವುದು ಕಂಡುಬಂದಲ್ಲಿ ಸಂಬಂಧಪಟ್ಟ ಅಭಿಯಂತರರನ್ನು ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂಬುದನ್ನು ತಿಳಿಯಪಡಿಸಿದೆ.

20/12/2016

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

***ಪ್ರತಿ:***

1. ವಿಶೇಷ ಆಯುಕ್ತರು, ಯೋಜನೆ/ಹಣಕಾಸು
2. ಪ್ರಧಾನ ಅಭಿಯಂತರರು ಮತ್ತು ಮುಖ್ಯ ಅಭಿಯಂತರರು (ಓ.ಎಫ್.ಸಿ.ಕೋಶ) ಸೂಕ್ತ ಕ್ರಮಕ್ಕಾಗಿ
3. ಮುಖ್ಯ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ) ಸೂಕ್ತ ಕ್ರಮಕ್ಕಾಗಿ
4. ಎಲ್ಲಾ ವಲಯಗಳ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರಿಗೆ ಕಛೇರಿ ಆದೇಶವನ್ನು ತಮ್ಮ ಕೆಳಗಿನ ಅಧಿಕಾರಿಗಳಿಗೆ ಕಳುಹಿಸುವುದಕ್ಕಾಗಿ
5. ಕಛೇರಿ ಕಡತಕ್ಕೆ.